## ಅಬೆಡಿ ಮಿರಿಯಲ್
## ಸಂದರ್ಶನ

◆ **ನಿಮ್ಮ ಕೌಟುಂಬಿಕ ಹಿನ್ನೆಲೆ ಹಾಗೂ ಬಾಲ್ಯ ಜೀವನದ ಕುರಿತು ಹಂಚಿಕೊಳ್ಳಿ...**

ನನ್ನ ಅಪ್ಪ ಅಮ್ಮನಿಗೆ ನಾವು ಎಂಟು ಜನ ಮಕ್ಕಳು, ಐವರು ಹುಡುಗಿಯರು ಮತ್ತು ಮೂವರು ಹುಡುಗರು. ಅಮ್ಮ ಝುವೆನಾ ಯೊವಾಲಿ ಮತ್ತು ಅಪ್ಪ ಅಬೆಡಿ ಎರಾಡಿ ಜಯೆಲ್. ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ 'ಯುವಿರ' ನಮ್ಮ ಊರು. ಈ ಪಟ್ಟಣದಲ್ಲಿ ನನ್ನ ಕುಟುಂಬದ ಜೊತೆ ನಾನು ಬೆಳೆದೆ. ಆದರೆ ನನಗೆ ಒಂಬತ್ತು ವರ್ಷ ವಯಸ್ಸಾದಾಗ ನನ್ನ ತಂದೆ ತಾಯಿಯರಿಂದ ದೂರಾಗಬೇಕಾಗಿ ಬಂತು. ನಮ್ಮ ಹಳ್ಳಿಯಲ್ಲಿ ಗುಂಡಿನ ಶಬ್ದ ಕೇಳಿದಾಗ ಇನ್ನೇನು ಊರು ಬಿಡುವ ಸಮಯ ಬಂತೆಂದು ನಮಗೆ ತಿಳಿಯಿತು. ಚಿಕ್ಕ ಹುಡುಗಿಯಾದ್ದರಿಂದ ನಾನು ಹೆಚ್ಚು ಭಯಭೀತಳಾಗಿದ್ದೆ. ಈ ರೀತಿಯ ಕರಾಳ ರಾತ್ರಿಗಳಲ್ಲಿ ಅವರು ಗಂಡಸರನ್ನು ಮತ್ತು ಹೆಂಗಸರನ್ನ ಬೇರ್ಪಡಿಸಿ ಕರೆದೊಯ್ಯುತ್ತಿದ್ದರು. ನಿಜ ಹೇಳಬೇಕೆಂದರೆ ಯಾರಾದರೂ ಯಾಕೆ ಹೀಗೆ ಮಾಡುತ್ತಾರೆಂದು ನನಗೀಗಲೂ ಅರ್ಥವಾಗಿಲ್ಲ. ಇದು ನನ್ನ ಜ್ಞಾನವನ್ನು ಮೀರಿದ್ದು. ನಂತರ ನನ್ನ ಚಿಕ್ಕಮ್ಮ, ಅಣ್ಣ ಮತ್ತು ಚಿಕ್ಕ ತಂಗಿಯೊಂದಿಗೆ ಮಲಾವಿಗೆ ಬಂದೆ. ಈಗ ಈ ಮೂವರೊಂದಿಗೆ ನಾನಿಲ್ಲೆ ವಾಸಿಸುತ್ತಿದ್ದೇನೆ.

◆ **ನಿಮ್ಮ ವಲಸೆ ಅನುಭವ ಕುರಿತು ಇನ್ನಷ್ಟು ಬರೆಯಿರಿ... ಒಂದು ದೇಶದ ಗಡಿಯಿಂದ ಇನ್ನೊಂದು ದೇಶದ ಗಡಿ ದಾಟಿ ಹೇಗೆ ಬಂದಿರಿ? ನೀವು ಎದುರಿಸಿದ ಕಷ್ಟ ನಷ್ಟಗಳೇನು?**

ಕಾಂಗೋದ ಗಡಿ ದಾಟಿ ನಾವು ಬುರಂಡಿಗೆ ಕಾಲ್ನಡಿಗೆಯಲ್ಲಿ ಬಂದೆವು. ಬುರಂಡಿಯಿಂದ ತಾನ್ಜೇನಿಯಾಗೆ ಬಸ್ಸಿನ ಮೂಲಕ ಪ್ರಯಾಣಿಸಿದೆವು. ಅಲ್ಲಿಂದ ಮಲಾವಿಗೆ. ಗಡಿಯಲ್ಲಿ ಎಲ್ಲರೂ ಒಬ್ಬರನ್ನೊಬ್ಬರು ತಳ್ಳಾಡುತ್ತಿದ್ದರು. ಅದೊಂತರದ ಗೊಂದಲ, ಗಲಿಬಿಲಿಯ ವಾತಾವರಣ. ನಾವೆಲ್ಲರೂ ಬೇರೆ ಬೇರೆಯಾಗಿದ್ದೆವು. ಅಂದರೆ ಚಿಕ್ಕಮ್ಮ, ಅಣ್ಣ ಮತ್ತು ನಾನು. ಮತ್ತೆ ಆ ಗಡಿಬಿಡಿಯಲ್ಲಿ ನನ್ನ ಕೈ ಹಿಡಿದಿದ್ದ ತಂಗಿ ಕಳೆದು ಹೋದಳು. ನಾವು ಅವಳನ್ನ ಕಳೆದುಕೊಂಡೆವು. ಅದು ಬಲು ಕೆಡುಕಿನ ಸಮಯ. ಆದರೆ ಚಿಕ್ಕಮ್ಮ ನನ್ನ ಮೇಲೆ ಸಿಡುಕಲಿಲ್ಲ. ಹೇಗೆ ತಾನೆ ಅವಳು ನನ್ನ ಮೇಲೆ ಕೋಪಿಸಿಕೊಂಡಾಳು? ನಾನೂ ಕೂಡ ಇನ್ನೂ ಚಿಕ್ಕವಳೇ ಅಲ್ಲವೇ? ಎರಡು ವಾರಗಳ ತನಕ ಅವಳ ಬಗ್ಗೆ ಏನೂ ಗೊತ್ತಾಗಲಿಲ್ಲ. ಕಳೆದೇ ಹೋದಳು ಅಂದುಕೊಂಡೆವು. ನಂತರದಲ್ಲೊಂದು ದಿನ ನಮ್ಮ ನೆರೆಯವರೊಬ್ಬರು ಬಂದು ನಿಮ್ಮ ಮಗುವನ್ನ ನೋಡಿದ್ದಾಗಿ ಹೇಳಿದರು. ಆದರೆ ಚಿಕ್ಕಮ್ಮ ನಂಬಲಿಲ್ಲ. ನಿಜಕ್ಕೂ ಆಕೆ ಪೋಷಕರಿಲ್ಲದ ಅನಾಥ ಮಕ್ಕಳ ಕೇಂದ್ರದ ಪಕ್ಕ ಹಾದು ಹೋಗುವಾಗ ನನ್ನ ಪುಟ್ಟ ತಂಗಿಯನ್ನ ನೋಡಿದ್ದಳು. ನಾವು ನೇರ ಅಲ್ಲಿಗೆ ಹೋಗಿ ಅವಳನ್ನ ಸೇರಿಕೊಂಡೆವು. ಅದಂತೂ ಬಹಳವೇ ಸಂತೋಷದ ಗಳಿಗೆ. ಇಂಥ ದುರ್ಘಟನೆಗಳ ನೂರಾರು ಉದಾಹಣೆಗಳು ನಿಮಗಿಲ್ಲಿ ಸಿಗುತ್ತಲೇ ಇರುತ್ತವೆ.

◆ **ಈಗ ರೆಫ್ಯೂಜಿ ಕ್ಯಾಂಪಿನ ಜೀವನ ಹೇಗಿದೆ?**

ನಿರಾಶ್ರಿತರಾಗಿ ಮಹಿಳೆಯರಿಗೆ ಬಹಳವೇ ಕಷ್ಟ. ಶಿಬಿರದಲ್ಲಿ ಬದುಕುವುದು ಸುಲಭವಲ್ಲ. ಮೂಲಭೂತ ಅವಶ್ಯಕತೆಗಳಾದ ಕೂಳು ನೀರಿಗೂ ಇಲ್ಲಿ ಪರದಾಟ. ಒಳ್ಳೆಯ ಗುಣಮಟ್ಟದ ಶಿಕ್ಷಣವೂ ಸಿಗುವುದಿಲ್ಲ. ನೀರನ್ನ ಹೊತ್ತು ತರುವುದೇ ನಮ್ಮ ದಿನ ನಿತ್ಯದ ಕೆಲಸ. ಜೊತೆಗೆ ಇಟ್ಟಿಗೆಗಳನ್ನ ಮಾಡಿ ಮಾರಿ ಅದರಿಂದ ದೊರೆತ ಅಲ್ಪದರಲ್ಲಿ ನಾವು ಬದುಕಬೇಕು. ಯಾಕೆಂದರೆ ನಮಗೆ ಊಟ ಹೊಂಚುವ ಮತ್ತು ಮಕ್ಕಳ ಜವಾಬ್ದಾರಿ ಯಾವಾಗಲೂ ಇದ್ದೇ ಇರುತ್ತದೆ. ಆದರೆ ಇಲ್ಲಿನ ತಾಯಂದಿರು ನಮಗೆ ಸ್ಫೂರ್ತಿ ತುಂಬುತ್ತಾರೆ. ನಾವಿಲ್ಲಿ ಆಹಾರವನ್ನು ಹಂಚಿ ತಿನ್ನುತ್ತೇವೆ. ಕಳೆದುಕೊಂಡದ್ದನ್ನ ನೆನೆದು ದುಃಖಿತರಾದಾಗ ಅವರು ನಮ್ಮ ಜೊತೆ ನಿಲ್ಲುತ್ತಾರೆ ಮತ್ತೆ ನಾವೂ ಅವರ ನೋವಿಗೆ ಜೊತೆಯಾಗುತ್ತೇವೆ. ಅದ್ದೇಗೋ ಕಷ್ಟದಲ್ಲಿ ನಾವು ಒಬ್ಬರಿಗೊಬ್ಬರು ಆಸರೆಯಾಗುತ್ತೇವೆ.

◆ **ನಿರಾಶ್ರಿತ ಶಿಬಿರದಲ್ಲಿ ಚಿಕ್ಕಮಕ್ಕಳಿಗೆ ಹಾಗೂ**